ಈ) ಕೇಂದ್ರ ಪುರಸ್ಕೃತ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಅಂಗನವಾಡಿ ಕೇಂದ್ರಗಳಲ್ಲಿ 0–6 ವರ್ಷದ ಮಕ್ಕಳಿಗೆ, ಗರ್ಭಿಣಿ–ಬಾಣಂತಿಯರಿಗೆ ಹಾಗೂ ಕಿಶೋರಿಯರಿಗೆ ನೀಡುತ್ತಿರುವ ಐ.ಸಿ.ಡಿ.ಎಸ್ ಸೇವೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಅನುವಾಗುವಂತೆ ಪುನರ್ ರಚಿಸಲು ಹಾಗೂ ಬಲಪಡಿಸಲು ಕೇಂದ್ರ ಸರ್ಕಾರ ನೀಡಿರುವ ಮಾರ್ಗಸೂಚಿಗಳನ್ನು ಮಿಷನ್‌ಮೋಡ್‌ನಲ್ಲಿ ಅನುಷ್ಠಾನಗೊಳಿಸಲು ಕ್ರಮ ಜರುಗಿಸಲಾಗುತ್ತಿದೆ. ಅದರಲ್ಲಿ ಶೇ.10ರಷ್ಟು ಯೋಜನೆಗಳನ್ನು ಮಾತ್ರ ಸ್ವಯಂಸೇವಾ ಸಂಸ್ಥೆಗಳು ನಡೆಸಲು ಮಾರ್ಗಸೂಚಿಗಳಲ್ಲಿ ತಿಳಿಸಲಾಗಿದೆ. ಇದು ಐ.ಸಿ.ಡಿ.ಎಸ್ ಯೋಜನೆಯ ಪುನರವ ರಚನೆಯ ಹೊರತು ಖಾಸಗೀಕರಣವಲ್ಲ.

ನರೇಗಾ ಯೋಜನೆಯಡಿ ಉದ್ಯೋಗ ಕಾರ್ಡ್

1471(1711); ಶ್ರೀ ರಮೇಶ್ ಕುಮಾರ್ ಕೆ.ಆರ್. (ಶ್ರೀನಿವಾಸಪುರ)

ಅ) ರಾಜ್ಯದಲ್ಲಿ ಒಟ್ಟು ಲಭ್ಯವಿರುವ ಎಂ.ಎನ್.ಆರ್.ಇ.ಜಿ.ಎ ಯೋಜನೆಯಡಿಯಲ್ಲಿ ನೀಡಿರುವ ಉದ್ಯೋಗ ಖಾತೆ (ಜಾಬ್ ಕಾರ್ಡ್) ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು);

ಆ) ಇದರ ಅಂದಾಜಿನಂತೆ ಕಳೆದ 2 ವರ್ಷಗಳಲ್ಲಿ ರಾಜ್ಯಕ್ಕೆ ಕೇಂದ್ರದಿಂದ ಬರಬೇಕಾಗಿರುವ ಹಣವೆಷ್ಟು;

ಇ) ಇಲ್ಲಿಯವರೆಗೆ ಕೇಂದ್ರ ಸರ್ಕಾರ ಬಿಡುಗಡೆಗೊಳಿಸಿರುವ ಹಣದ ಮೊತ್ತವೆಷ್ಟು;

ಈ) ಇದರಲ್ಲಿ, ಎಷ್ಟು ಹಣವನ್ನು ಬಳಸಿಕೊಳ್ಳಲಾಗಿದೆ (ಜಿಲ್ಲಾವಾರು ವಿವರ ನೀಡುವುದು)?

ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಒಟ್ಟು 57.83 ಲಕ್ಷ ಉದ್ಯೋಗ ಚೀಟಿ (ಜಾಬ್ ಕಾರ್ಡ್)ಗಳನ್ನು ವಿತರಿಸಲಾಗಿರುತ್ತದೆ. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ)

- ಈ ಯೋಜನೆಯಡಿ 2012–13ನೇ ಸಾಲಿಗೆ ರೂ.244297.00 ಲಕ್ಷ ಕಾರ್ಮಿಕ ಆಯವ್ಯಯ ಮಂಜೂರಾಗಿದ್ದು, ಕೇಂದ್ರದಿಂದ ಸದರಿ ಸಾಲಿನಲ್ಲಿ ರೂ.234525.12 ಲಕ್ಷ ಅನುದಾನ ಬರಬೇಕಾಗಿರುತ್ತದೆ.
- ಈ ಯೋಜನೆಯಡಿ 2013–14ನೇ ಸಾಲಿಗೆ ರೂ.213301.92 ಲಕ್ಷ ಕಾರ್ಮಿಕ ಆಯವ್ಯಯ ಮಂಜೂರಾಗಿದ್ದು, ಕೇಂದ್ರದಿಂದ ಸದರಿ ಸಾಲಿನಲ್ಲಿ ರೂ.204764.84 ಲಕ್ಷ ಅನುದಾನ ಬರಬೇಕಾಗಿರುತ್ತದೆ.
- ಈ ಯೋಜನೆಯಡಿ 2014–15ನೇ ಸಾಲಿಗೆ ರೂ.315176.52 ಲಕ್ಷ ಕಾರ್ಮಿಕ ಆಯವ್ಯಯ ಮಂಜೂರಾಗಿದ್ದು, ಕೇಂದ್ರದಿಂದ ಸದರಿ ಸಾಲಿನಲ್ಲಿ ರೂ.302569.46 ಲಕ್ಷ ಅನುದಾನ ಬರಬೇಕಾಗಿರುತ್ತದೆ.

ಈ ಯೋಜನೆಯು ಬೇಡಿಕೆಯಾಧಾರಿತ ಯೋಜನೆಯಾಗಿದ್ದು, ಹಿಂದಿನ ತ್ರೈಮಾಸಿಕದ ಶೇಕಡಾವಾರು ಮಾನವದಿನಗಳ ಸೃಜನೆ ಹಾಗೂ ಪ್ರಗತಿಯನ್ನು ಆಧರಿಸಿ ಕೇಂದ್ರ ಸರ್ಕಾರವು ಅನುದಾನವನ್ನು ಬಿಡುಗಡೆ ಮಾಡುತ್ತದೆ.

ಇ) ಈ ಯೋಜನೆಯಡಿ ಕೇಂದ್ರ ಸರ್ಕಾರವು 2012–13ನೇ ಸಾಲಿನಲ್ಲಿ ರೂ.123193.69 ಲಕ್ಷ ಮತ್ತು 2013–14ನೇ ಸಾಲಿನಲ್ಲಿ ರೂ.159606.81 ಲಕ್ಷ ಹಾಗೂ 2014–15ನೇ ಸಾಲಿನಲ್ಲಿ ರೂ.136746.27 ಲಕ್ಷ (ಜನವರಿ–2015ರ ಅಂತ್ಯಕ್ಕೆ) ಅನುದಾನವನ್ನು ಬಿಡುಗಡೆ ಮಾಡಿರುತ್ತದೆ.

ಈ) ಈ ಯೋಜನೆಯಡಿ 2012–13ನೇ ಸಾಲಿನಲ್ಲಿ ರೂ.147129.47 ಲಕ್ಷ ಮತ್ತು 2013–14ನೇ ಸಾಲಿನಲ್ಲಿ ರೂ.207898.19 ಲಕ್ಷ ಅನುದಾನವನ್ನು ಹಾಗೂ 2014–15ನೇ ಸಾಲಿನಲ್ಲಿ ರೂ.126667.94 ಲಕ್ಷ (ದಿ:31–01–2015ರ ಎಂಐಎಸ್ ನಂತೆ) ಅನುದಾನವನ್ನು ಬಳಸಿಕೊಳ್ಳಲಾಗಿರುತ್ತದೆ. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಅನುಬಂಧ

ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ವಿತರಿಸಲಾದ ಉದ್ಯೋಗ ಚೀಟಿಗಳ (ಜಾಬ್ ಕಾರ್ಡ್) ಸಂಖ್ಯೆ ಮತ್ತು 2012-13 ಮತ್ತು 2013-14 ರಲ್ಲಾದ 2014-15ನೇ ಸಾಲಿನಲ್ಲಿ ಬಳಸಿಕೊಳ್ಳಲಾದ ಅನುದಾನದ ವಿವರಗಳು

ಕ್ರ ಸಂ	ಜಿಲ್ಲೆಗಳ ಹೆಸರು	ವಿತರಿಸಲಾದ ಒಟ್ಟು ಉದ್ಯೋಗ ಚೀಟಿಗಳ (ಜಾಬ್ ಕಾರ್ಡ್) ಸಂಖ್ಯೆ	ಬಳಸಿಕೊಳ್ಳಲಾದ ಅನುದಾನ (ರೂ. ಲಕ್ಷಗಳಲ್ಲಿ)		
			2012-13 (ಲೆಕ್ಕ ಪರಿಶೋಧನೆಗೆ ಒಳಪಟ್ಟಿರುವಂತೆ)	2013-14 (ಲೆಕ್ಕ ಪರಿಶೋಧನೆಗೆ ಒಳಪಟ್ಟಿರುವಂತೆ)	2014-15 (ಎಂ ಐ ಎಸ್ ಮಾಹಿತಿಯಂತೆ)
-1-	-2-	-3-	-4-	-5-	-6-
1	ಬಂಗಲೆಕೋಟೆ	213920	5947.05	8485.95	9047.95
2	ಬೆಂಗಳೂರು ಗ್ರಾಮಾಂತರ	81734	2020.77	1059.78	1277.99
3	ಬೆಂಗಳೂರು ನಗರ	53267	112.59	133.21	149.43
4	ಬೆಳಗಾವಿ	519363	7931.95	9563.66	7055.24
5	ಬಳ್ಳಾರಿ	214208	3062.36	4137.39	2884.39
6	ಬೀದರ್	194996	4012.77	6181.74	3235.95
7	ವಿಜಯಪುರ	250944	10020.65	10387.57	660.01
8	ಚಾಮರಾಜನಗರ	135340	2769.57	4418.74	3916.72
9	ಚಿಕ್ಕಬಳ್ಳಾಪುರ	156056	1558.01	2460.31	2612.11
10	ಚಿಕ್ಕಮಗಳೂರು	136083	2739.20	3053.04	3074.15
11	ಚಿತ್ರದುರ್ಗ	257812	10237.17	18587.84	8365.94
12	ದಕ್ಷಿಣ ಕನ್ನಡ	74023	1284.02	1798.22	897.90
13	ದಾವಣಗೆರೆ	252133	16393.26	19546.85	8867.17
14	ಧಾರವಾಡ	127154	5687.86	7329.57	9304.91
15	ಗದಗ	113688	3792.96	5820.84	4018.41
16	ಕಲಬುರಗಿ	311227	7767.08	13979.75	6247.24
17	ಹಾಸನ	231886	7749.43	6598.22	7298.87
18	ಹಾವೇರಿ	183777	5008.44	7047.02	4266.61
19	ಕೊಡಗು	65865	1792.99	1475.94	742.38
20	ಕೋಲಾರ	199694	4051.18	9006.10	4185.43
21	ಕೊಪ್ಪಳ	224856	4632.58	6861.11	5308.46
22	ಮಂಡ್ಯ	232425	2671.72	4944.32	5058.57
23	ಮೈಸೂರು	206208	2601.08	4148.41	1791.87
24	ರಾಯಚೂರು	267712	9508.23	9223.00	6428.93
25	ರಾಮನಗರ	169244	4458.12	6089.87	8200.40
26	ಶಿವಮೊಗ್ಗ	181546	4600.44	6160.84	4405.31
27	ತುಮಕೂರು	322097	6823.48	10775.92	3751.99
28	ಉಡುಪಿ	46931	293.17	429.04	341.7
29	ಉತ್ತರ ಕನ್ನಡ	148363	2836.08	2531.98	2669.45
30	ಯಾದಗಿರಿ	209859	4204.76	9254.99	1393.87
ಒಟ್ಟು		5783041	147129.47	207898.19	126667.94

ಜಂಟಿ ನಿರ್ದೇಶಕರು (ಜಾಬ್ಸ್)
ಗ್ರಾಮೀಣಾಭಿವೃದ್ಧಿ ಆಯುಕ್ತರ ಜ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ